**ದಿನಾಂಕಃ 04.03.2021.ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- ಶ್ರೀ ಡಿ ಕೆ ಎಂ 1 ನೇ ಪ್ರತಿವಾದಿ ಪರ ವಕೀಲರಿಂದಃ**

ಹಿಂದಿನ ಪಾಟೀ ಸವಾಲಿನ ಸಮಯದಲ್ಲಿ ನ್ಯಾಯಾಲಯ ಅವಶ್ಯಕ ಪಕ್ಷಗಾರರನ್ನ ಅಥವಾ ಬಿಟ್ಟಿರುವ ಕುಟುಂಬದ ಆಸ್ತಿಗಳನ್ನ ದಾವೆಯಲ್ಲಿ ಸೇರಿಸಲು ಅವಕಾಶ ನೀಡಿದೆ ಎನ್ನುವ ವಿಚಾರ ನಿಮಗೆ ಗೊತ್ತಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. 1 ನೇ ಪ್ರತಿವಾದಿ ಬಾಲಕೃಷ್ಣರವರಿಗೆ ಪ್ರದೀಪ ಮತ್ತು ಶ್ವೇತ ಎನ್ನುವ ಇಬ್ಬರು ಮಕ್ಕಳು ಎಂದರೆ ಸರಿ. ಬಾಲಕೃಷ್ಣ ಮತ್ತು ಅವರ ಮಕ್ಕಳು ವಿಭಾಗ ಮಾಡಿಕೊಂಡಿರುವ ವಿಚಾರ ನಿಮಗೆ ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಬಾಲಕೃಷ್ಣರವರ ಮಕ್ಕಳು ತಮ್ಮ ಭಾಗಕ್ಕೆ ಬಂದಿರುವ ಸ್ವತ್ತುಗಳನ್ನ 2015 ನೇ ಇಸವಿಯಲ್ಲೇ ಎನ್ ಜೆ ಮೂರ್ತಿ ಮತ್ತು ಎನ್ ಜೆ ಕೃಷ್ಣೇಗೌಡರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಭಾಗ ಆಗಿಲ್ಲ ಅದೆಲ್ಲಾ ಸುಳ್ಳು ಎನ್ನುತ್ತಾರೆ. 1 ನೇ ಪ್ರತಿವಾದಿ ಬಾಲಕೃಷ್ಣ ಮತ್ತು ಅವರ ಹೆಂಡತಿ ಅಂಬುಜಾಕ್ಷಿರವರು ಶಂಕ ಮತ್ತು ಸಾಲಗಾಮೆ ಊರುಗಳಲ್ಲಿ ಇರುವ ಆಸ್ತಿಗಳನ್ನ ಮಾರಾಟ ಮಾಡಲು ಕ್ರಯದ ಕರಾರು ಪತ್ರಗಳನ್ನ ಈ ದಾವೆ ಹೂಡುವ ಮೊದಲೇ ಮಾಡಿಕೊಂಡಿರುವ ವಿಚಾರ ನಿಮಗೆ ಗೊತ್ತಾ ಎಂದರೆ ಸಾಕ್ಷಿ ಅದೆಲ್ಲಾ ಸೃಷ್ಟಿಸಿಕೊಂಡಿರುವ ದಾಖಲೆಗಳು ಎನ್ನುತ್ತಾರೆ.

ದಾವಾ ಐಟಂ ನಂ. 7 ರಲ್ಲಿ ಸಾಲಗಾಮೆ ಗ್ರಾಮದಲ್ಲಿ ಸರ್ವೆ ನಂಬರ್ಃ 312 ಮತ್ತು 312/2 ಸ್ವತ್ತುಗಳನ್ನ ತೋರಿಸಿದ್ದು ಆ ಸ್ವತ್ತುಗಳು 1 ನೇ ಪ್ರತಿವಾದಿಗಾಗಲೀ ಅಥವಾ ಅವರ ಕುಟುಂಬಕ್ಕಾಗಲೀ ಸೇರಿದ ಸ್ವತ್ತುಗಳಲ್ಲಾ ಎಂದರೆ ಸರಿಯಲ್ಲ. ಆ ಸ್ವತ್ತುಗಳು ಯಾರ ಹೆಸರಿನಲ್ಲಿ ಇದೆ ಎಂದು ಗೊತ್ತಾ ಎಂದರೆ ಸಾಕ್ಷಿ ಬಾಲಕೃಷ್ಣ ರವರ ಹೆಸರಿನಲ್ಲಿ ಇದೆ ಎನ್ನುತ್ತಾರೆ. ಅವರ

ಹೆಸರಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ. 12 ರಲ್ಲಿ ಇರುವ ಟ್ರ್ಯಾಕ್ಟರ್ ಮತ್ತು ಟ್ರೈಲರ್ ಅಂಬುಜಾಕ್ಷಿ ರವರ ಹೆಸರಿನಲ್ಲಿ ಇದ್ದು ಅದು ಅವರ ಸ್ವಯಾರ್ಜಿತ ಸ್ವತ್ತಾಗಿದೆ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ಸದರಿ ಟ್ರ್ಯಾಕ್ಟರ್ ಮತುತ್ತ ಟ್ರೆಲರ್ ದಾಖಲೆಗಳನ್ನ ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅಂಬುಜಾಕ್ಷಿ ಸಾಲ ಮಾಡಿ ಸದರಿ ವಾಹನವನ್ನ ಕೊಂಡುಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.13 ಮತ್ತು 14 ರಲ್ಲಿ ಇರುವ ವಾಹನಗಳು ಬಾಲಕೃಷ್ಣ ರವರ ಹೆಸರಿನಲ್ಲೇ ಇವೆ. ಆ ಸಂಬಂಧ ನೀವು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.15 ರಲ್ಲಿರುವ ಹುಂಡೈ ಐ-20 ಕಾರು ಯಾರ ಹೆಸರಿನಲ್ಲಿ ಇದೆ ಎನ್ನುವ ಬಗ್ಗೆ ನ್ಯಾಯಾಲಯಕ್ಕೆ ನೀವು ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರದೀಪ್ ರವರ ಹೆಸರಿನಲ್ಲಿ ಪೆಟ್ರೋಲ್ ಬಂಕ್ ಇದ್ದು ಅವರು ಆ ಬಂಕ್ ನ್ನು ನಡೆಸುತ್ತಿದ್ದಾರೆ ಎಂದರೆ ಹೌದು ಎನ್ನುತ್ತಾರೆ. ಅವರ ಸ್ವಂತ ಆದಾಯದಿಂದ ದಾವಾ ಐಟಂ ನಂ. 13 ರಿಂದ 15 ರವರೆಗ ಇರುವ ವಾಹನಗಳನ್ನ ಪ್ರದೀಪ್ ರವರು ಕೊಂಡುಕೊಂಡಿದ್ದಾರೆ ಎಂದರೆ ಸಾಕ್ಷಿ ಸರಿಯಲ್ಲ ಎಲ್ಲಾ ಒಟ್ಟು ಕುಟುಂಬದ ಆದಾಯದಿಂದ ಕೊಂಡಿದ್ದಾರೆ ಎನ್ನುತ್ತಾರೆ. ದಾವಾ ಐಟಂ ನಂ. 12 ರಿಂದ 15 ರವರೆಗೆ ಇರುವ ವಾಹನಗಳ ಮಾಲೀಕರನ್ನ ಈ ದಾವೆಯಲ್ಲಿ ಬೇಕೆಂದೆ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಹಾಗೆಯೇ ನೀವು ಬೇಕೆಂದೆ ಅವುಗಳ ದಾಖಲೆಗಳನ್ನ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

ಬಾಲಕೃಷ್ಣರವರು ಅವರ ಭಾಗದ ಆಸ್ತಿಗಳನ್ನ ಹೆಚ್ಚು ಹಣ ಖರ್ಚು ಮಾಡಿ ಅಭಿವೃದ್ದಿಪಡಿಸಿದ್ದಾರೆ ಎಂದರೆ ಸಾಕ್ಷಿ ಒಟ್ಟು ಕುಟುಂಬದ ಆದಾಯದಿಂದ ಮಾಡಿದ್ದಾರೆ

ಎನ್ನುತ್ತಾರೆ. ಇತ್ತೀಚೆಗೆ ಬಾಲಕೃಷ್ಣರವರಿಗೂ ಮತ್ತು ರಾಮಕೃಷ್ಣ , ಬಲರಾಮೇಗೌಡ ಮತ್ತು ಸಹೋದರರಿಗೂ ಸಂಬಂಧ ಚೆನ್ನಾಗಿಲ್ಲ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಉಳಿದ ಸಹೋದರರೆಲ್ಲಾ ಒಂದಾಗಿದ್ದು ಬಾಲಕೃಷ್ಣ ರವರಿಗೆ ತೊಂದರೆ ಕೊಡಲು ಈ ದಾವೆಯನ್ನ ಹೂಡಿಸಿದ್ದಾರೆ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ನೀವು ಒಟ್ಟು ಕುಟುಂಬದ ಸದಸ್ಯರೇ ಅಲ್ಲಾ ಮತ್ತು ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳು ಅಲ್ಲಾ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನಿಮಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಸಿ ಎಸ್ ಡಿ 2 ರಿಂದ 5 ನೇ ಪ್ರತಿವಾದಿಗಳ ಪರ ವಕೀಲರಿಂದಃ**
**ಯಾವುದೇ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**
**ಮರುವಿಚಾರಣೆಃ ಇಲ್ಲ**
ನನ್ನಃ ಉಃಲೇಃಕ್ಕೆಃ ಬೆರಳಚ್ಚು ಮಾಡಲಾಗಿದೆ

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧನ್ಯಾದಂ, ಚನ್ನರಾಯಪಟ್ಟಣ

OS 59/2017
PW-1